

ರತಿ ಇ.ಆರ್. ಅವರು ಹೇಳುವುದು ಹೀಗೆ: ''ಲಿವ್ ಇನ್ ರಿಲೇಷನ್‌ಶಿಪ್ ಎನ್ನುವುದು ಪ್ರೌಢರಾದ ಇಬ್ಬರು ವ್ಯಕ್ತಿಗಳು ತೆಗೆದುಕೊಳ್ಳುವ ನಿರ್ಧಾರ ಆಗಿರುವುದರಿಂದ, ಅಲ್ಲಿ ವರದಕ್ಷಿಣೆಗೆ ಅವಕಾಶವಿಲ್ಲ. ಇತ್ತೀಚಿನ ಅನೇಕ ವರ್ಷಗಳಲ್ಲಿ ನಾನು ಕೌಟುಂಬಿಕ ನ್ಯಾಯಾಲಯದ ಪರಿಸ್ಥಿತಿಯನ್ನು ಗಮನಿಸುತ್ತ ಬಂದಿರುವೆ. ಆ ಅನುಭವದ ಆಧಾರದಲ್ಲಿ ಹೇಳುವುದಾದರೆ, ಮದುವೆಯಲ್ಲಿನ ಸಮಸ್ಯೆಗಳಿಗೆ ಲಿವ್ ಇನ್ ರಿಲೇಷನ್‌ಶಿಪ್ ಅತ್ಯುತ್ತಮವಾದ ಪರ್ಯಾಯವಾಗಿದೆ. ಯಾಕೆಂದರೆ, ಯಾವುದೇ ಧರ್ಮದಲ್ಲಾಗಲೀ, ಪಿತೃಪ್ರಧಾನ ಸಮಾಜದಲ್ಲಿ ಮಹಿಳೆಗೆ ದೊರೆಯುವ ಸ್ವಾತಂತ್ರ್ಯ ಅಷ್ಟರಲ್ಲೇ ಇದೆ. ಆದ್ದರಿಂದ ಆಕೆಗೆ ಹಿಂಸೆಯೆನಿಸಿದಲ್ಲಿ ಅನಾಯಾಸವಾಗಿ ಸಂಬಂಧದಿಂದ ಹೊರನಡೆಯುವ ಸ್ವಾತಂತ್ರ್ಯವಿರುವುದು ಉತ್ತಮ. ಅದಕ್ಕೆ ಪೂರಕವಾದ ವ್ಯವಸ್ಥೆಯನ್ನು ಧರ್ಮ ನಿರಪೇಕ್ಷವಾಗಿ ಕಲ್ಪಿಸಿಕೊಡಬೇಕಾಗಿದೆ. ಹಾಗೆಂದು ಅದು ಸ್ವೇಚ್ಛೆಗೆ ಅವಕಾಶ ಮಾಡಿಕೊಡಬಾರದು. ಪರಸ್ಪರರಿಗೆ ಬದ್ಧರಾಗಿದ್ದುಕೊಂಡು ನಡೆಸುವ ಬಾಳುವೆಯಲ್ಲಿ ದೃಢತೆ ಅತೀ ಮುಖ್ಯ. ಈ ಸಂಬಂಧದಲ್ಲಿ ತಂದೆ–ತಾಯಿ ಮೂಗು ತೂರಿಸುವುದೂ ಸರಿಯಲ್ಲ. ಈ ಸಂಬಂಧದ ಯಶಸ್ಸಿನಲ್ಲಿ ತಮ್ಮ ಪಾಲಿದೆ ಎಂದು ಬೀಗುವುದಾಗಲೀ, ಸಂಬಂಧವು ಸೋತರೆ ಅಲ್ಲಿ ಮಕ್ಕಳನ್ನು ಹೀನಾಮಾನವಾಗಿ ಬೈಯುವುದಾಗಲೀ ಮಾಡದೆ, ನಿರ್ಧಾರಗಳನ್ನು ತೆಗೆದುಕೊಳ್ಳಲು ಮಕ್ಕಳನ್ನು ಅವರ ಪಾಡಿಗೆ ಬಿಟ್ಟುಬಿಡಬೇಕು. ಅಷ್ಟೇ ಅಲ್ಲ, ಲಿವ್ ಇನ್ ರಿಲೇಷನ್‌ಶಿಪ್‌ನಲ್ಲಿ ಇರುವುದಕ್ಕೆ ಎಲ್‌ಜಿಬಿಟಿಕ್ಯೂ ಸಮುದಾಯವನ್ನೂ ಪರಿಗಣಿಸಬೇಕು''.

ಉತ್ತರಾಖಂಡ ಸರ್ಕಾರವು ಇತ್ತೀಚೆಗಷ್ಟೇ 'ಲಿವ್ ಇನ್ ರಿಲೇಷನ್‌ಶಿಪ್‌ನಲ್ಲಿ ಇರುವವರು ನೋಂದಣಿ ಮಾಡಿಕೊಳ್ಳಬೇಕು' ಎಂದು ಪ್ರಕಟಿಸಿರುವುದನ್ನು ಉಲ್ಲೇಖಿಸುವ ರತಿ ಇ.ಆರ್. ಅವರು, 'ಸುರಕ್ಷತೆಯ ದೃಷ್ಟಿಯಿಂದ ಈ ರೀತಿಯ ಪ್ರಕಟಣೆ ನೀಡಲಾಗಿದೆ ಎಂದಿಟ್ಟುಕೊಳ್ಳೋಣ. ಆದರೆ, ಹೀಗೆ ನೋಂದಣಿ ಮಾಡಿಕೊಳ್ಳುವುದರಿಂದ ಈ ಸಂಬಂಧದಲ್ಲಿ ಇರುವವರಿಗೆ ಆಗುವ ಲಾಭ ಏನು ಎಂದು ಸರ್ಕಾರ ಹೇಳಬೇಕಲ್ಲವೇ?' ಎಂದು ಪ್ರಶ್ನಿಸುತ್ತಾರೆ.

ಲಿವ್ ಇನ್ ರಿಲೇಷನ್‌ಶಿಪ್‌ನಲ್ಲಿ ಇದ್ದೇವೆ ಎಂದು ಇಬ್ಬರು ವ್ಯಕ್ತಿಗಳು ಹೇಳಿದ ಕೂಡಲೇ ಗಕ್ಕನೆ ಎದುರಾಗುವುದು – ಹಾಗಿದ್ದರೆ ನಿಮಗೆ ಮಕ್ಕಳು ಬೇಡವೆ? ಮಕ್ಕಳಾದ ಮೇಲೆ ಅವನು ಬಿಟ್ಟು ಹೋದರೆ ಮಕ್ಕಳಿಗೇನು ಗತಿ? ಎನ್ನುವ ಪ್ರಶ್ನೆಗಳು. ಇಂತಹ ಪ್ರಶ್ನೆಗಳನ್ನು ನಿರೀಕ್ಷಿಸಿ, ಅವುಗಳಿಗೆ ತಕ್ಕ ಉತ್ತರವನ್ನು ಕಂಡುಕೊಂಡ ಬಳಿಕವೇ ಲಿವ್ ಇನ್ ರಿಲೇಷನ್‌ಶಿಪ್‌ಗೆ ಪ್ರವೇಶಿಸುವಷ್ಟು ಪ್ರೌಢತೆಯನ್ನು ಇಬ್ಬರು ವ್ಯಕ್ತಿಗಳು ಹೊಂದಿರಬೇಕು. ಹಾಗೆಂದು ಈ ಸಂಬಂಧದಲ್ಲಿ ಮಕ್ಕಳಾದರೆ ಆ ಸಂತಾನವನ್ನು ಅಕ್ರಮವೆಂದೇನೂ ಪರಿಗಣಿಸಲಾಗುವುದಿಲ್ಲ. ಇಬ್ಬರು ವ್ಯಕ್ತಿಗಳ ಸಂಬಂಧವು ದೀರ್ಘಕಾಲದ್ದಾಗಿದ್ದು ಮಕ್ಕಳಾದರೆ, ಅವರನ್ನು ನ್ಯಾಯಸಮ್ಮತವಾದ ಮಕ್ಕಳೆಂದೇ ಪರಿಗಣಿಸಲಾಗುತ್ತದೆ. ಇಲ್ಲಿ ನ್ಯಾಯಸಮ್ಮತ ಎನ್ನುವುದು ಆಸ್ತಿ ಮತ್ತು ಉತ್ತರಾಧಿಕಾರಕ್ಕೆ ಸಂಬಂಧಿಸಿದಂತೆ ಬಳಸಲಾಗುವ ಪದ ಎನ್ನುವುದನ್ನು ಗಮನಿಸಬೇಕು. ಈ ಭೂಮಿಯ ಮೇಲಿನ ಯಾವುದೇ ಜೀವಿಯನ್ನು ನ್ಯಾಯಸಮ್ಮತವಲ್ಲ ಎಂದು ಹೇಳುವುದು ಸರಿಯಲ್ಲ ಎಂಬ ಗ್ರಹಿಕೆ ಮಾನವೀಯ ಸಮಾಜದಲ್ಲಿರಲೇಬೇಕು.

ಇಬ್ಬರು ವ್ಯಕ್ತಿಗಳು ಮದುವೆಯಾದವರಂತೆಯೇ ಸಹಜೀವನ ನಡೆಸಿದಾಗ ಹುಟ್ಟುವ ಮಕ್ಕಳಿಗೆ ಆಸ್ತಿಯ ಹಕ್ಕು ಮತ್ತು ಉತ್ತರಾಧಿಕಾರವು ದೊರೆಯುತ್ತದೆ ಎಂದು ಸುಪ್ರೀಂ ಕೋರ್ಟ್ 2022ರಲ್ಲಿ ಹೇಳಿದೆ. ಹಾಗೆಂದು ಆಸ್ತಿಯ ಹಕ್ಕುಗಳಿಗೆ ಸಂಬಂಧಿಸಿದ ಕಾನೂನುಗಳಲ್ಲಿಯೂ ಸೂಕ್ಷ್ಮತೆ ಇರುವುದನ್ನು ಗಮನಿಸಬೇಕು. ಹಿಂದೂ ಆಸ್ತಿ ಹಕ್ಕಿನಡಿಯೇ ಎರಡು ವಿಭಾಗಗಳಿದ್ದು, ತಂದೆಯಿರುವಾಗ ಸಹಜವಾಗಿ ಮಕ್ಕಳಿಗೆ ಆಸ್ತಿ ಹಕ್ಕು ದೊರೆಯುವ ಕಾನೂನು ಮತ್ತು ತಂದೆಯ ಮರಣಾನಂತರವಷ್ಟೇ ಮಕ್ಕಳಿಗೆ ಆಸ್ತಿ ಹಕ್ಕು ದೊರೆಯುವ ಕಾನೂನುಗಳಿವೆ. ಇವುಗಳನ್ನು ಗಮನದಲ್ಲಿಟ್ಟುಕೊಂಡೇ, ಪ್ರಕರಣಕ್ಕೆ ಅನ್ವಯವಾಗುವಂತೆ ವ್ಯಕ್ತಿಯ ಮೂಲಭೂತ ಹಕ್ಕುಗಳು ಉಲ್ಲಂಘನೆಯಾಗದಂತೆ ನ್ಯಾಯಾಲಯವು ನಿರ್ಣಯ ತೆಗೆದುಕೊಳ್ಳುತ್ತದೆ.

## ಸಹಪಯಣ ಮತ್ತು ಸೌಹಾರ್ದದ ಇಂಧನ

ಲಿವ್ ಇನ್ ಎಂದಾಗ, ಕಾನೂನುಗಳ ಸಿಕ್ಕುಗಳೊಳಗೆ ಸಿಕ್ಕಿಹಾಕಿಕೊಳ್ಳುವ ಪರಿಸ್ಥಿತಿಯನ್ನು ಎಲ್ಲ ಸಂಬಂಧಗಳೂ ತಲುಪಬೇಕು ಎಂದೇನಿಲ್ಲ. ಪ್ರೀತಿ ಮತ್ತು ಸೌಹಾರ್ದದೊಂದಿಗೆ ಆರಂಭವಾಗುವ ಜೀವನದಲ್ಲಿ ಸಹಪ್ರಯಾಣವು ಸಾಧ್ಯವಾಗುತ್ತಿಲ್ಲ ಎನ್ನುವುದು ಅರಿವಿಗೆ ಬರುತ್ತಲೇ, ಗೌರವಯುತ ವಿದಾಯಕ್ಕೆ ಸಿದ್ಧತೆಗಳನ್ನು ಮಾಡಿಕೊಳ್ಳುವುದು ಉತ್ತಮ. ಹಾಗೆಂದು ಎಲ್ಲ ಸಂಬಂಧಗಳೂ ವಿದಾಯದೊಂದಿಗೆ ಮುಕ್ತಾಯವಾಗುತ್ತದೆ